<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

ದಿನಾಂಕಃ**18.09.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

<u>ಪಾಟೀ ಸವಾಲುಃ</u> ಪ್ರತಿವಾದಿಯರ ಪರ ಶ್ರೀ ಸಿ ಬಿ ವಕೀಲರಿಂದಃ-

ನನ್ನ ಅಜ್ಜನ ಹೆಸರು ಬಸಪ್ಪ. ನನ್ನ ಅಜ್ಜ ಬಸಪ್ಪನಿಗೆ ನಂಜುಂಡಪ್ಪ ಮತ್ತು ರೇವಣ್ಣಸಿದ್ದಪ್ಪ ಎಂಬ ಇಬ್ಬರು ಗಂಡು ಮಕ್ಕಳು ಮತ್ತು 7 ಜನ ಹೆಣ್ಣುಮಕ್ಕಳು, ಎಲ್ಲಾ ಹೆಣ್ಣು ಮಕ್ಕಳ ಹೆಸರು ನನಗೆ ಗೊತ್ತಿಲ್ಲ ಆದರೆ ಅವರುಗಳೆಲ್ಲರು ಮೃತಪಟ್ಟಿರುತ್ತಾರೆ. ಈ ದಾವೆಯಲ್ಲಿ ನಾವು ನಂಜುಂಡಪ್ಪರವರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಾನು ಎಸ್.ಎಸ್.ಎಲ್.ಸಿ.ವರೆಗೂ ಓದಿರುತ್ತೇನೆ. ನಮ್ಮ ಕುಟುಂಬದಲ್ಲಿ 2005 ಕ್ಕು ಹಿಂದೆ ವಿಭಾಗವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಮಾವನ ಮಗನನ್ನೆ ವಿವಾಹವಾಗಿದ್ದೇನೆ ಎಂದರೆ ಸರಿ. ನಾನು ಮದುವೆಯಾದ ನಂತರ ಒಂದು ವಾರದವರೆಗೂ ಸಹಃ ಗಂಡನ ಜೊತೆ ಇರಲಿಲ್ಲ ಎಂದರೆ ಸರಿ. ನಂತರ ನಾನು ಶಿವಣ್ಣ ರವರನ್ನು 2 ನೇ ಮದುವೆಯಾಗಿರುತ್ತೇನೆ ಎಂದರೆ ಸರಿ. ನಾನು ಈಗ ದಾವಣಗೆರೆಯಲ್ಲಿ ವಾಸವಿದ್ದೇನೆ. ನಾನು ನನ್ನ ಊರಿಗೆ ಯಾವತ್ತು ಸಹ ಬಂದಿಲ್ಲ ಎಂದರೆ ಸರಿಯಲ್ಲ, ನಾನು ನನ್ನ ತಂದೆ-ತಾಯಿ ಮೃತಪಟ್ಟಾಗ ಬಂದಿರುತ್ತೇನೆ. ನನ್ನ ತಂದೆ ಮೃತಪಟ್ಟು ಸುಮಾರು 20 ವರ್ಷ ಕಳೆದಿರುತ್ತದೆ. ನನ್ನ ತಂದೆಯ ಅಂತ್ಯಕ್ರಿಯೆ ಗಳನ್ನು 2 ನೇ ಪ್ರತಿವಾದಿ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ನನ್ನ ತಾಯಿ ಮೃತಪಟ್ಟಾಗ ಅವರ ಅಂತ್ಯಕ್ರಿಯೇಗಳನ್ನು ಸಹ 2 ನೇ ಪ್ರತಿವಾದಿ ಮಾಡಿರುತ್ತಾರೆ ಎಂದರೆ ಸರಿ.

ಈ ದಾವೆಯ ವಾದಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ವಕೀಲರಿಗೆ ನಾನೇ ಎಲ್ಲಾ ಮಾಹಿತಿ ನೀಡಿರುತ್ತೇನೆ ಅವರು ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದು ತೋರಿಸಲು ವಕೀಲರಿಗೆ ನಾನು ದಾಖಲೆಗಳನ್ನು ನೀಡಿರುತ್ತೇನೆ. ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನಾನು ಯಾವುದೇ ದಾಖಲೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ಅಜ್ಜನ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವ ದಾಖಲೆ ನೀಡಿರುತ್ತೀರಿ ಎಂದರೆ ನಾವು ವಕೀಲರಿಗೆ ನೀಡಿರುತ್ತೇವೆ ಅವರು ಯಾವುದನ್ನು ಹಾಜರುಪಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ದಾವಾ ಸ್ವತ್ತು ಎಷ್ಟು ಎಷ್ಟು ಆಸ್ತಿ ಇದೆ ಎಂದರೆ ಸಾಕ್ಷಿಯು ಒಟ್ಟು 4 ಸ್ವತ್ತುಗಳ ಮೇಲೆ ದಾವೆ ಹಾಕಿರುತ್ತೇವೆ ಸರ್ವೆ ನಂಬರ್ ನನಗೆ ಈಗ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ದಾವಾ ಅನುಸೂಚಿ ಸ್ವತ್ತಾದ ಸರ್ವೆ ನಂ.21/ಪಿ5 ರ ಚೆಕ್ಕುಬಂದಿ ನನಗೆ ಗೊತ್ತಿಲ್ಲ. 2 ನೇ ದಾವಾ ಅನುಸೂಚಿ ಸ್ವತ್ತಾದ ಸರ್ವೆ ನಂ.34/ಪಿ2 ರ ಚೆಕ್ಕುಬಂದಿ ನನಗೆ ಗೊತ್ತಿಲ್ಲ. 3 ನೇ ದಾವಾ ಅನುಸೂಚಿ ಸ್ವತ್ತಾದ ಸರ್ವೆ ನಂ.116/2 ಪಿ2 ರ ಚೆಕ್ಕುಬಂದಿ ನನಗೆ

ಗೊತ್ತಿಲ್ಲ. ಈ ದಾವೆಯನ್ನು 3 ಆಸ್ತಿಗಳಿಗೆ ವಿಭಾಗ ಕೋರಿ ಸಲ್ಲಿಸಲಾಗಿದೆ ಎಂದರೆ ಸರಿ. ದಾವಾ ಸ್ವತ್ತುಗಳ ಸ್ವಾಧೀನವನ್ನು ಈಗಲೂ ಸಹ 2 ನೇ ಪ್ರತಿವಾದಿಯೇ ಹೊಂದಿರುತ್ತಾರೆ ಎಂದರೆ ಸರಿ.

1 ರಿಂದ 3 ನೇ ದಾವಾ ಅನುಸೂಚಿ ಸ್ವತ್ತುಗಳು ಯಾವ ಯಾವ ರೀತಿಯ ಸ್ವತ್ತುಗಳು ಎಂದು ನನಗೆ ಗೊತ್ತಿಲ್ಲ. 1 ರಿಂದ 3 ನೇ ದಾವಾ ಅನುಸೂಚಿ ಸ್ವತ್ತುಗಳ ಪಹಣಿಯು 2 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. 2 ನೇ ಪ್ರತಿವಾದಿಯು ನಮ್ಮ ತಂದೆ-ತಾಯಿಯ ಪಾಲನೆ ಪೋಷಣೆ ಮಾಡಿರುವುದರಿಂದ ಅವರೇ ದಾವಾ ಸ್ವತ್ತುಗಳ ಸ್ವಾಧೀನವನ್ನು ಸಹ ಹೊಂದಿರುತ್ತಾರೆ ಎಂದರೆ ಸರಿ.

ಈ ದಾವೆಯನ್ನು ನಾನು 1 ರಿಂದ 3 ನೇ ದಾವಾ ಅನುಸೂಚಿ ಸ್ವತ್ತುಗಳಲ್ಲಿ ವಿಭಾಗ ಕೋರಿ ಸಲ್ಲಿಸಿರುತ್ತೇನೆ. ಗಿರಿಯಾಪುರ ಗ್ರಾಮದಲ್ಲಿ ನನಗೆ ಮನೆ ಇಲ್ಲ ಎಂದರೆ ಸರಿ. 1 ರಿಂದ 3 ನೇ ದಾವಾ ಅನುಸೂಚಿ ಸ್ವತ್ತುಗಳನ್ನು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1 ರಿಂದ 3 ನೇ ದಾವಾ ಅನುಸೂಚಿ ಸ್ವತ್ತುಗಳು ನನ್ನ ತಾತಾನ ಆಸ್ತಿ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು ನನ್ನ ತಂದೆಯ ಜೀವಿತಾವಾಧಿಯಲ್ಲಿ ಇದ್ದ ಆಸ್ತಿಗಳು ಎಂದರೆ ಸರಿ. ನನ್ನ ತಂದೆಯ ಮರಣದ ನಂತರ 1 ರಿಂದ 3 ನೇ ದಾವಾ ಅನುಸೂಚಿ ಸ್ವತ್ತುಗಳ ಖಾತೆಯು ನನ್ನ ತಾಯಿ ಮತ್ತು 2 ನೇ ಪ್ರತಿವಾದಿಗೆ ಜಂಟಿಯಾಗಿ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.